<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>S.C.103/2017</u>

ದಿಃ 25.10.2023
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-26 Pw-19

| | | |
|---|---|---|
| ಹೆಸರು | ಃ | ಡಿ. ಶ್ರೀಧರ್ |
| ತಂದೆಯ ಹೆಸರು | ಃ | ಎಸ್ ದೊರೆಸ್ವಾಮಿ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಸಹಾಯಕ ಎಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು |
| ವಾಸಸ್ಥಳ | ಃ | ಬೆಂಗಳೂರು |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ಸನ್ 2006ರಿಂದ ಈವರೆಗೆ ನಾನು ಬೆಂಗಳೂರಿನ ದಕ್ಷಿಣ ವಿಭಾಗದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಅಭಿಯಂತರ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ26.11.2016ರಂದು ನಮ್ಮ ಪಿಡಬ್ಲ್ಯುಡಿ ಕಚೇರಿಗೆ ತಾವರೆಕೆರೆ ಪೊಲೀಸರು ಒಂದು ಕೋರಿಕಾ ಪತ್ರ ಸಲ್ಲಿಸಿಕೊಂಡ ಆಧಾರದ ಮೇಲೆ ದಿಃ02.12.2016ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಾವರೆಕೆರೆ ಪೊಲೀಸ್ ಠಾಣೆಯ ಪಿಸಿ ನಂಬರ್ 359 ಶ್ರೀ ಚನ್ನಪ್ಪ

ಇವರ ತೋರಿಕೆಯ ಮೇರೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಎರಡು ನಕ್ಷೆಗಳನ್ನು ತಯಾರಿಸಿಕೊಟ್ಟಿರುತ್ತೇನೆ.

3. ಸದರಿ ನಕ್ಷೆಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ, ಅವುಗಳನ್ನು ಈಗ ನಿ.ಪಿ.25, 26 ಎಂದು, ಮತ್ತು ಅವುಗಳ ಮೇಲಿರುವ ನನ್ನ ಸಹಿಗಳನ್ನು ಈಗ ಕ್ರಮವಾಗಿ ನಿ.ಪಿ.25(ಎ) ಮತ್ತು 26(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ. ಆರ್.ಕೆ.ಎಸ್., ವಕೀಲರಿಂದ ಆರೋಪಿಗಳ ಪರವಾಗಿಃ</u>

4. ದಿಃ26.11.2016 ರಂದು ನಮ್ಮ ಪಿಡಬ್ಲ್ಯೂಡಿ ಕಚೇರಿಗೆ ತಾವರೆಕೆರೆ ಪೊಲೀಸರು ಒಂದು ಕೋರಿಕಾ ಪತ್ರ ಸಲ್ಲಿಸಿಕೊಂಡ ಆಧಾರದ ಮೇಲೆ ದಿಃ02.12.2016 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಾವರೆಕೆರೆ ಪೊಲೀಸ್ ಠಾಣೆಯ ಪಿಸಿ ನಂಬರ್ 359 ಶ್ರೀ ಚನ್ನಪ್ಪ ಇವರ ತೋರಿಕೆಯ ಮೇರೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಎರಡು ನಕ್ಷೆಗಳನ್ನು ತಯಾರಿಸಿಕೊಟ್ಟಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

5. ನಿ.ಪಿ.25 ಮತ್ತು 26ಗಳನ್ನು ಪೊಲೀಸರ ಕೋರಿಕೆಯ ಮೇರೆಗೆ ಅವರ ಅನುಕೂಲಕ್ಕೆ ತಕ್ಕಂತೆ ನೀಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

6. ಪೊಲೀಸರು ಸದರಿ ಸ್ಥಳಗಳಿಗೆ ಸಂಬಂಧಿಸಿದಂತೆ ನನಗೆ ಯಾವುದೇ ದಾಖಲಾತಿಗಳನ್ನು ನೀಡಿರಲಿಲ್ಲ ಎನ್ನುವುದು ಸರಿ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.